ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 6/12/19

# ರಾಜ್ಯಪಾಲರ ವಿಧಾನಸಭೆ ಪ್ರವೇಶಕ್ಕೆ ಅಡ್ಡಿ!

## ಗಂಭೀರ ಸ್ವರೂಪ ಪಡೆದ ಗವರ್ನರ್-ದೀದಿ ಸರಕಾರದ ನಡುವಿನ ಸಂಘರ್ಷ

**ಕೋಲ್ಕೊತಾ:** ವಿಧಾನಸಭೆ ಸಚಿವಾಲಯದ ಪ್ರವೇಶ ದ್ವಾರಕ್ಕೆ ಬೀಗ ಜಡಿಯುವ ಮೂಲಕ ಪಶ್ಚಿಮ ಬಂಗಾಳ ರಾಜ್ಯಪಾಲರು ಹಾಗೂ ಮಮತಾ ಬ್ಯಾನರ್ಜಿ ಸರಕಾರದ ನಡುವಿನ ಸಂಘರ್ಷ ಗುರುವಾರ ಮತ್ತಷ್ಟು ತೀವ್ರಗೊಂಡಿದೆ.

ರಾಜ್ಯಪಾಲ ಜಗದೀಪ್ ಧನ್‌ಕರ್ ಅವರು ಗುರುವಾರ ವಿಧಾನಸಭೆ ಆವರಣಕ್ಕೆ ಭೇಟಿ ನೀಡಿದಾಗ ಪ್ರವೇಶದ್ವಾರ-3ಕ್ಕೆ ಬೀಗ ಹಾಕಲಾಗಿತ್ತು. ಅಲ್ಲದೇ ಶಿಷ್ಟಾಚಾರದಂತೆ ಅವರನ್ನು ಸ್ವಾಗತಿಸಲು ವಿಧಾನಸಭಾಧ್ಯಕ್ಷರು ಮತ್ತು ಸಚಿವಾಲಯ ಸಿಬ್ಬಂದಿಯೂ ಆಗಮಿಸಿರಲಿಲ್ಲ. ಆದರಿಂದ ವಿಚಲಿತರಾಗದ ರಾಜ್ಯಪಾಲರು ಪತ್ರಕರ್ತರು ಹಾಗೂ ಅಧಿಕಾರಿಗಳು ಪ್ರವೇಶಿಸುವ ಪ್ರವೇಶದ್ವಾರ-2ರ ಮೂಲಕ ಸಚಿವಾಲಯ ಪ್ರವೇಶಿಸಿದರು. ರಾಜ್ಯ ವಿಧಾನಸಭೆ ನಿಯಮಾವಳಿ ಪ್ರಕಾರ ಪ್ರವೇಶದ್ವಾರ-3 ರಾಜ್ಯಪಾಲರ ಆಗಮನ-ನಿರ್ಗಮನಕ್ಕೆ ಮಾತ್ರ ಸೀಮಿತ.

''ನನ್ನನ್ನು ಅವಮಾನಿಸಲೆಂದೇ ಪ್ರವೇಶದ್ವಾರ-3ಕ್ಕೆ ಬೀಗ ಹಾಕಲಾಗಿತ್ತು. ಇದು ವೈಯಕ್ತಿಕವಾಗಿ ನನಗೆ ಮಾಡಿದ ಅವಮಾನವಲ್ಲ, ಬದಲಿಗೆ ಸರಕಾರವು ರಾಜ್ಯದ ಜನತೆ ಮತ್ತು ಸಂವಿಧಾನಕ್ಕೆ ಮಾಡಿದ ಅವಮಾನ. ರಾಜ್ಯದ ಪ್ರಜಾಪ್ರಭುತ್ವದಲ್ಲಿ ಇದು ಕರಾಳ ದಿನ,'' ಎಂದು ರಾಜ್ಯಪಾಲರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಆಡಳಿತಾರೂಢ ತೃಣಮೂಲ ಕಾಂಗ್ರೆಸ್, ''ಸರಕಾರದ ವಿರುದ್ಧ ಮಾಧ್ಯಮಗಳ ಜತೆ ಮಾತನಾಡುವುದನ್ನು ನಿಲ್ಲಿಸಿ ರಾಜ್ಯದ ಮುಖ್ಯಸ್ಥರಂತೆ ವರ್ತಿಸುವುದನ್ನು ಕಲಿಯಿರಿ,'' ಎಂದು ತಿರುಗೇಟು ನೀಡಿದೆ.



ಕೋಲ್ಕೊತಾದಲ್ಲಿರುವ ಪಶ್ಚಿಮ ಬಂಗಾಳ ವಿಧಾನಸಭೆ ಸಚಿವಾಲಯ ಕಟ್ಟಡದ ಪ್ರವೇಶದ್ವಾರ-3ರ ಎದುರು ರಾಜ್ಯಪಾಲ ಜಗದೀಪ್ ಧನಕರ್ ಗುರುವಾರ ಸುದ್ದಿಗಾರರ ಜತೆ ಮಾತನಾಡಿದರು.

ವಿಧಾನಸಭೆ ಸಚಿವಾಲಯದಲ್ಲಿನ ಸೌಲಭ್ಯಗಳ ಪರಿಶೀಲನೆ ನಡೆಸಲು ವಿಧಾನಸಭೆಗೆ ಭೇಟಿ ನೀಡುವುದಾಗಿ ಬುಧವಾರ ಸ್ಪೀಕರ್ ಬಿಮನ್ ಬ್ಯಾನರ್ಜಿ ಅವರಿಗೆ ಪತ್ರ ಬರೆದು ತಿಳಿಸಿದ್ದರು. ಜತೆಗೆ ಸಚಿವಾಲಯದ ಗ್ರಂಥಾಲಯಕ್ಕೂ ಭೇಟಿ ನೀಡುವ ಇಂಗಿತ ವ್ಯಕ್ತಪಡಿಸಿದ್ದರು.

> ಸಂವಿಧಾನಿಕ ಹುದ್ದೆ ಹಾಗೂ ಪ್ರಜಾಪ್ರಭುತ್ವದ ನಿಯಮಗಳಿಗೆ ತಿಲಾಂಜಲಿ ಇಡಲು ಪಶ್ಚಿಮ ಬಂಗಾಳ ಸರಕಾರ ಮುಂದಾಗಿದೆ. ಇಂತಹ ವರ್ತನೆಗೆ ನಾನು ಬಗ್ಗುವವನಲ್ಲ.
>
> **- ಜಗದೀಪ್ ಧನಕರ್** ಪ.ಬಂಗಾಳ ರಾಜ್ಯಪಾಲ

> ರಾಜ್ಯದಲ್ಲಿ ಅರಾಜಕತೆ ಸೃಷ್ಟಿಸಲು ರಾಜ್ಯಪಾಲರು ಪ್ರಯತ್ನಿಸುತ್ತಿದ್ದಾರೆ. ತಮ್ಮ ಸಾಂವಿಧಾನಿಕ ಮಿತಿಗಳನ್ನು ಅರಿತು ಅವರು ಕಾರ್ಯನಿರ್ವಹಿಸಬೇಕು.
>
> **- ಪಾರ್ಥ ಚಟರ್ಜಿ**, ಪ.ಬಂಗಾಳ ಸಚಿವ

''ನನ್ನ ಪತ್ರ ತಲುಪಿದ ತಕ್ಷಣ ಸ್ಪೀಕರ್ ಅವರಿಂದ ನನಗೆ ಮತ್ತು ನನ್ನ ಪತ್ನಿಗೆ ಭೋಜನ ಆಯೋಜಿಸಿರುವ ಆಮಂತ್ರಣ ಬಂತು. ಆದಾದ ಒಂದೂವರೆ ಗಂಟೆಯಲ್ಲಿ ಸ್ಪೀಕರ್ ಅವರು ಭೋಜನ ಆಹ್ವಾನವನ್ನು ರದ್ದುಪಡಿಸಿರುವುದಾಗಿ ವಿಧಾನಸಭೆ ಕಾರ್ಯದರ್ಶಿ ರಾಜಭವನಕ್ಕೆ ಮಾಹಿತಿ ನೀಡಿದರು. ಅಲ್ಲದೇ ನನ್ನ ಭೇಟಿ ವೇಳೆ ಉಪಸ್ಥಿತರಿರಲು ವಿಧಾನಸಭೆ ಕಾರ್ಯದರ್ಶಿ ಹಾಗೂ ವಿಶೇಷ ಕಾರ್ಯದರ್ಶಿಯವರಿಗೆ ಸಾಧ್ಯವಾಗುತ್ತಿಲ್ಲ ಎಂಬುದಾಗಿಯೂ ತಿಳಿಸಲಾಯಿತು. ಒಂದೂವರೆ ಗಂಟೆಯಲ್ಲೇ ನಿಲುವು ಏಕೆ ಬದಲಾವಣೆ ಆಯಿತೋ ತಿಳಿಯುತ್ತಿಲ್ಲ. ಏನೇ ಆದರೂ ನನ್ನ ಭೇಟಿ ವಿಚಾರ ಗೊತ್ತಿದ್ದೂ ಪ್ರವೇಶದ್ವಾರಕ್ಕೆ ಬೀಗ ಹಾಕಿದ್ದು ಸರಿಯಲ್ಲ,'' ಎಂದು ರಾಜ್ಯಪಾಲರು ಆಕ್ರೋಶ ವ್ಯಕ್ತಪಡಿಸಿದರು.

11